ಆ) ಪುರಸಭೆಯ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ನಾಗರೀಕರಿಗಾಗುವ ತೊಂದರೆಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ಪ್ರಸ್ತಾಪದ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಇಲ್ಲ.

ಇ) ಕಡಿಮೆ ವೆಚ್ಚದ ನೈರ್ಮಲೀಕರಣ ವ್ಯವಸ್ಥೆಯನ್ನು ಏರ್ಪಡಿಸಲು ಪರಿಶೀಲಿಸಲಾಗುವುದು.

ಪುತ್ತೂರು ಪುರಸಭೆಯಲ್ಲಿರುವ ಟೌನ್ ಹಾಲ್ ಕಟ್ಟಡದ ಬಗ್ಗೆ

೨೩೦೨. ಶ್ರೀ ವಿನಯ ಕುಮಾರ್ ಸೊರಕೆ (ಪುತ್ತೂರು).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪುತ್ತೂರು ಪುರಸಭೆಗೆ ಪುರಭವನ ಕಟ್ಟಡ ಕಟ್ಟಲು ಮಂಜೂರಾಗಿರುವ ಹಣವೆಷ್ಟು ?

ಆ) ಸದರಿ ಹಣದಲ್ಲಿ ಖರ್ಚಾದ ಹಣವೆಷ್ಟು ?

ಇ) ಈ ಕಟ್ಟಡದ ಕಾಮಗಾರಿಯು ಅರ್ಧದಲ್ಲಿ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಯಾವುದೇ ಮೊತ್ತ ಮಂಜೂರಾಗಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಹೌದು.

ಈ) ಕಟ್ಟಡವನ್ನು ಪೂರ್ಣಗೊಳಿಸಲು ಪುರಸಭೆ ಕ್ರಮ ಕೈಗೊಳ್ಳುತ್ತಿದೆ.

ಹೌಸಿಂಗ್ ಬೋರ್ಡ್ ಮನೆಗಳ ಬಗ್ಗೆ

೨೪೦೫. ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ರಾಜ್ಯ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕರ್ನಾಟಕ ಗೃಹ ಮಂಡಳಿಯವರು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾದ ಕಟ್ಟಿಸಿದ ಮನೆಗಳು ಎಷ್ಟು ? ಮತ್ತು ಆದೇಶವೆಂದು ಹೊರಡಿಸಲಾಯಿತು ?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸದರಿ ಮಂಡಳಿಯು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾದ ಕಟ್ಟಿಸಿದ ಮನೆಗಳು ಎಷ್ಟು ಮತ್ತು ಯಾವಾಗ ? (ತಾಲ್ಲೂಕುವಾರು ಮಾಹಿತಿ ನೀಡುವುದು).

ಇ) ಈ ಮನೆಗಳನ್ನು ಲೋಕೋಪಯೋಗಿ ಇಲಾಖೆಯಿಂದ ಹಿಂದಕ್ಕೆ ಪಡೆದು ಈಗ ನಿರ್ವಹಿಸಲಾಗುವ ಬೆಲೆಗೆ ವಾಸ್ತವ್ಯ ಮಾಡುತ್ತಿರುವವರಿಗೆ ಮಾರಲು ಸಾಧ್ಯವೇ ?

ಈ) ಹೊನ್ನಾವರದಲ್ಲಿ ಕರ್ನಾಟಕ ಗೃಹ ಮಂಡಳಿ ಕಟ್ಟಿಸಿದ್ದ ಖಾಲಿಯಿರುವ ಮನೆಗಳು ಎಷ್ಟು?

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ರಾಜ್ಯ ವಸತಿ ಸಚಿವರು).—

ಅ) ಗೃಹ ಮಂಡಳಿಯಿಂದ ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾದ ಒಟ್ಟು ಮನೆಗಳ ಸಂಖ್ಯೆ ೪೦೦. ಸರ್ಕಾರಿ ಆದೇಶವನ್ನು ವಿವಿಧ ದಿನಾಂಕಗಳಲ್ಲಿ ಹೊರಡಿಸಲಾಗಿದೆ.

(ಶೆ.೧೦.೭೪ ರಿಂದ ೯.೧೧.೮೩ ರವರೆಗೆ ಒಟ್ಟು ೧೧ ಆದೇಶಗಳನ್ನು ಅನುಬಂಧ 'ಅ'ದಲ್ಲಿ ಲಗತ್ತಿಸಿದೆ)

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂಡಳಿಯು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾದ ಮನೆಗಳ ಸಂಖ್ಯೆ ೪೩೭, ತಾಲ್ಲೂಕುವಾರು ವಿವರ ಮತ್ತು ಮಾಹಿತಿಗಳನ್ನು ಅನುಬಂಧ 'ಆ'ದಲ್ಲಿ ನೀಡಲಾಗಿದೆ.

ಇ) ಈಗಾಗಲೇ ಮನೆಗಳನ್ನು ಲೋಕೋಪಯೋಗಿ ಇಲಾಖೆಗೆ ಸರ್ಕಾರಿ ಆದೇಶದಂತೆ ವರ್ಗಾಯಿಸಿರುವುದರಿಂದ ಹಿಂದಕ್ಕೆ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಕಡಿಮೆ ಆದಾಯ ವರ್ಗದ ಮನೆಗಳು ೧೩

ಅನುಬಂಧ–ಅ

ಹೌಸಿಂಗ್‌ಬೋರ್ಡ್ ಮನೆಗಳ ಬಗ್ಗೆ

ಒಟ್ಟು ಮನೆ ಸಂಖ್ಯೆ	ತಾಲ್ಲೂಕಿನ ಹೆಸರು		ಮನೆಗಳ ಸಂಖ್ಯೆ	ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ
೪೩೭	೧ ಕಾರವಾರ	೫೬	೧	ಪಿಡಬ್ಲ್ಯೂಡಿ ೧೫೧ ಬಿಒಕ್ಯೂ ೭೭ ದಿನಾಂಕ ೨೪.೧೧.೭೭ ಮತ್ತು
			೨	ಎಫ್‌ಡಿ ೧೮ ಎಲ್‌ಐಹೆಚ್ ೭೫ ದಿನಾಂಕ ೨೯.೩.೭೫
	೨ ಕುಮಟ	೩೨	೧	ಪಿಡಬ್ಲ್ಯೂಡಿ ೧೫೧ ಓಒಕ್ಯೂ ೭೭ ದಿನಾಂಕ ೨೪.೧೧.೭೭
			೨	ಎಫ್‌ಡಿ ೧೮ ಎಲ್‌ಐಹೆಚ್ ೭೫ ದಿನಾಂಕ ೨೯.೩.೭೫
			೩	ಆದ್ದರಿಂದ ೧೬ ಮನೆಗಳಿಗೆ ಸರ್ಕಾರಿ ಆದೇಶ ಸಂಖ್ಯೆ ಇಲ್ಲ.
	೩ ಹೊನ್ನಾವರ	೩೬	೧	ಪಿಡಬ್ಲ್ಯೂಡಿ ೧೫೧ ಬಿಒಕ್ಯೂ ೭೭, ದಿನಾಂಕ ೨೪.೧೧.೭೭
			೨	ಎಫ್‌ಡಿ. ೧೮ ಎಲ್‌ಐಹೆಚ್ ೭೫, ದಿನಾಂಕ ೨೯.೩.೭೫
			೩	ಆದ್ದರಿಂದ ೧೮ ಮನೆಗಳಿಗೆ ಸರ್ಕಾರಿ ಆದೇಶ ಸಂಖ್ಯೆ ಇಲ್ಲ.
	೪ ಭಟ್ಕಳ	೪೬	೧	ಪಿಡಬ್ಲ್ಯೂಡಿ ೧೫೧ ಬಿಒಕ್ಯೂ ೭೭ ದಿನಾಂಕ ೨೪.೧೧.೭೭
			೨	ಆದ್ದರಿಂದ ೧೮ ಮನೆಗಳಿಗೆ ಸರ್ಕಾರಿ ಆದೇಶ ಸಂಖ್ಯೆ ಇಲ್ಲ.
	೫ ಅಂಕೋಲ	೫೪	೧	ಪಿಡಬ್ಲ್ಯೂಡಿ ೧೫೨ ಪಿಬಿಎಲ್ ೮೨ ದಿನಾಂಕ ೧೬.೧೨.೮೨
			೨	ಪಿಡಬ್ಲ್ಯೂಡಿ ೧೫೧ ಬಿಒಕ್ಯೂ ೭೭, ದಿನಾಂಕ ೨೪.೧೧.೭೭.
			೩	೧೮ ಮನೆಗಳಿಗೆ ಸರ್ಕಾರಿ ಆದೇಶ ಸಂಖ್ಯೆ ಇಲ್ಲ.

೬	ಸಿರ್ಸಿ	೧೨೩	೧	ಪಿಡಬ್ಲ್ಯುಡಿ ೩೫ ಬಿಒಕ್ಯೂ ೭೪, ದಿನಾಂಕ ೫.೧೦.೭೫
			೨	ಪಿಡಬ್ಲ್ಯುಡಿ ೧೫೫ ಬಿಒಕ್ಯೂ ೮೦, ದಿನಾಂಕ ೯.೧೧.೮೩
೭	ಸಿದ್ದಾಪುರ	೧೦	೧	ಪಿಡಬ್ಲ್ಯುಡಿ ೩೫ ಬಿಒಕ್ಯೂ ೭೪ ದಿನಾಂಕ ೫.೧೦.೭೫
೮	ಹಳಿಯಾಳ	೫೭	೧	ಪಿಡಬ್ಲ್ಯುಡಿ ೧೫೧ ಬಿಒಕ್ಯೂ ೭೭ (೧) ದಿನಾಂಕ ೨೪ ೧೧,೭೭
			೨	ಹೆಚ್‌ಡಿ ೨೭ ಪಿಡಿಎಲ್ ೬೯ ದಿನಾಂಕ ೧೧.೨.೭೦
೯	ಯಲ್ಲಾಪುರ	೮	೧	ಪಿಡಬ್ಲ್ಯುಡಿ ೧೫೧ ಬಿಒಕ್ಯೂ ೭೭ (೧) ದಿನಾಂಕ ೨೪.೧೧.೭೭
			೨	ಪಿಡಬ್ಲ್ಯುಡಿ ೧೫೫ ಬಿಒಕ್ಯೂ ೮೦ ದಿನಾಂಕ ೯.೧೧.೮೩
೧೦	ಮಂಂದಗೋಡು	೧೫	೧	ಪಿಡಬ್ಲ್ಯುಡಿ ೧೫೫ ಬಿಒಕ್ಯೂ ೮೦ ದಿನಾಂಕ ೯.೧೧.೮೩
			೨	ಎಪ್‌ಡಿ ೧೮ ಎಲ್‌ಐಎಚ್ ೭೫ ದಿನಾಂಕ ೨೯.೩.೭೫
	ಒಟ್ಟು		೪೩೭	ಮನೆಗಳು

ANNEXURE–A

Sl. No.	Government Order and Date	Scheme	No. of estimates	Cost
1	G. O. No. PWD 35/BO. 74 B'lore dt. 5.10.74	LIGH & MIGH	315 LIGH 24 MIGH 339 Qrs	Rs46,00,000
2	G. O. No. PWD 35/BOQ 74 dt. 25.3.75	Teacher Qrs	330 Qrs.	
3	G. O. No. PWD 151 BOQ 77 (II) B'lore dt. 24.11.77	RHS	220 Qrs.	Rs.47,03,000
4	G. O. No. PWD 151 BOQ 77 (III) B'lore dt. 24.11.77	LIGH & MIGH	52 Qrs.	—
5	G. O. No PWD 151 BOQ 77 (I) B'lore dt. 24.11.77	TeacherQrs	408 Qrs.	Rs53.71,000
6	G. O. No. PWD 151 BOQ 77 B'lore dt. 15.4.78	MIGH & LIGH	3 MIGH 36 LIGH	Rs·17,36,700
7	G. O. No. PWD 27 BOQ 79 B'lore dt. 7.9.79	—	302 Qrs.	—
8	G. O. No. PWD 94 BOQ 81 Blore, dt. 29.5.82	LIGH	1 No. 38 Site No. 240	Rs. 39,183
9	G. O. No. PWD 60 BOQ 77 B'lore dt. 2.6.82	MIGH & LIGH	12 MIGH 23 LIGH	Rs.13.04.249
10	G O. No. HD 152 PBL 82 B'lore dt. 16.12.82	SRHS	110 Qrs	Rs.18,38.430
11	G. O. No. PWD 155 BOQ 80 B'lore dt. 9.11.83	Teacher Qrs.	322 Qrs	Rs.60,31.800

ಆಳಂದ ತಾಲ್ಲೂಕಿನಲ್ಲಿ ಡಿಪಿಎಪಿ ಹಾಗೂ ಆರ್‌ಎಲ್ ಇಜಿಪಿ ಕಾರ್ಯಕ್ರಮಗಳು

೨೪೨೦. ಶ್ರೀ ಶರಣಬಸಪ್ಪ ಪಾಟೀಲ್ (ಆಳಂದ).— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಹಾಗೂ ವಕ್ಫ್ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭ರಲ್ಲಿ ಆಳಂದ ತಾಲ್ಲೂಕಿನಲ್ಲಿ ಡಿ.ಪಿ.ಎ.ಪಿ ಹಾಗೂ ಆರ್.ಎಲ್.ಇ.ಜಿ.ಪಿ. ಯೋಜನೆಯಲ್ಲಿ ಮಂಜೂರು ಮಾಡಿರುವ ಜಿನುಗಂವ ಕೆರೆಗಳ ಸಂಖ್ಯೆ ಎಷ್ಟು ?